ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .
**ಸಿ.ಸಿ. ನಂ. 49 / 2024**

ಸಿಡಬ್ಲ್ಯೂಃ **1**
ಪಿಡಬ್ಲ್ಯೂಃ**1**

<u>ದಿನಾಂಕಃ **20-11-2025**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

ಸಾಕ್ಷಿಯ ಹೆಸರು - ಸವಿತ

ಗಂಡನ ಹೆಸರು - ಕಾಶಿನಾಥ.

ವಯಸ್ಸು - **38** ವರ್ಷ

ಉದ್ಯೋಗ - ಆರೋಗ್ಯ ಇಲಾಖೆಯಲ್ಲಿ ಕೆಲಸ

ವಾಸಸ್ಥಳಃ - ಯಾದಗಿರಿ

<u>ಮುಖ್ಯ ವಿಚಾರಣೆಃ ಸ.ಸ.ಅಭಿಯೋಜಕರಿಂದಃ</u>

ಚಾಸಾ-6 ರವರು ನನ್ನ ಗಂಡನಾಗಬೇಕು. ಚಾಸಾ-7 ಮತ್ತು 8 ರವರ ಪರಿಚಯ ನನಗೆ ಇರುತ್ತದೆ. ನಾನು ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದೇನೆ. ಕನಕದಾಸರವರ ಜಯಂತಿ ಇದ್ದ ಕಾರಣ ರಜೆ ಇತ್ತು. ಆದರಿಂದ ದಿನಾಂಕ **29.11.2023** ರಂದು ನಾನು ಕೆಲಸ ಮುಗಿಸಿಕೊಂಡು ಮನೆಗೆ ಬಂದು ಮನೆಗೆ ಬೀಗ ಹಾಕಿಕೊಂಡು ನನ್ನ ತವರು ಮನೆಯಾದ ಕಲಬುರಗಿಗೆ ಹೋಗಿದ್ದೆ. ಮರುದಿವಸ ದಿನಾಂಕ **01.12.2023** ರಂದು ಬೆಳಿಗ್ಗ **09.15** ಗಂಟೆಗೆ ಯಾದಗಿರಿಗೆ ಬಂದಿದ್ದೆ. ನಾನು ನನ್ನ ಮನೆಗೆ ಬಂದು ನೋಡಿದಾಗ ನನ್ನ ಮನೆಯ ಬೀಗ ಮುರಿದಿತ್ತು. ಬಾಗಿಲಿನ ಹತ್ತಿರ ರಾಡ್ ಬಿದ್ದಿತ್ತು. ಬೀಗ ಸಂಪೂರ್ಣವಾಗಿ ಮುರಿದಿತ್ತು. ನಾನು ಮನೆಯ ಒಳಗಡೆ ಹೋಗಿ ನೋಡಿದಾಗ ಮನೆಯಲ್ಲಿ ದ್ದ ಕಬೊರ್ಡ ತೆರೆದಿತ್ತು ಹಾಗೂ ಅದರಲಿದ್ದ ಸೀಕ್ರೆಟ ಲಾಕರ್ ಮುರಿದಿತ್ತು ಹಾಗೂ ಬಟೆಗಳು ಚೆಲ್ಲಾಪಿಲ್ಲಿಯಾಗಿ ಬಿದಿತ್ತು. ಡ್ರೆಸ್ಸಿಂಗ್ ಟೇಬಲ್ ಡ್ರಾ ತೆರೆದಿತ್ತು. ಸೀಕ್ರೆಟ ಲಾಕರ್ನಲ್ಲಿ ಇಟ್ಟಿದ್ದ **17** ಗ್ರಾಂ ಬಂಗಾರದ ತಾಳಿ ಚೇನ್ ಇತ್ತು. ಎರಡು ಬಂಗಾರದ **5** ಗ್ರಾಂ ಸುತ್ತುಂಗುರಗಳು ಇದ್ದವು. **45** ಗ್ರಾಂ ಬೆಳ್ಳಿ ಕಾಲು ಚೇನ್ ಇತ್ತು. **100** ಗ್ರಾಂ ನ ಬೆಳ್ಳಿ ಮೂರ್ತಿ ಇತ್ತು. **10** ಗ್ರಾಂ ನ ಬೆಳ್ಳಿಯ ಕಾಲುಂಗುರು ಇತ್ತು ಹಾಗೂ ನಗದು ಹಣ ರೂ. **5000/-** ಇತ್ತು. ಇವೆಲ್ಲವೂ ಸೀಕ್ರೆಟ ಲಾಕರ್ ನಿಂದ ಕಳ್ಳತನ ಆಗಿರುತವೆ. ನನ್ನ ಮನೆಯ ಪಕ್ಕದಲ್ಲಿ ರುವ ಚಾಸಾ-**8** ರವರಿಗೆ ಹಾಗೂ ನನ್ನ ಮನೆಯ ಮಾಲೀಕನಾದ ಚಾಸಾ-**7** ರವರಿಗೆ ಸಹಾ ಕಳ್ಳತನ ಆದ ಮನೆಯನ್ನು ಅವರಿಗೆ ತೋರಿಸಿದ್ದೆವು. ನಂತರ ನಾನು ಪೋಲೀಸ್ ಠಾಣೆಗೆ ದೂರನ್ನು ನೀಡಿದ್ದೆ. ನಂತರ ಪೋಲಿಸರು ಗುನ್ನಾ ಸ್ಥಳಕ್ಕೆ ಬಂದು ಕುರುಹುಗಳನ್ನು ಪಡೆದುಕೊಂಡು ಹೋದರು. ದೂರನ್ನು ನೀಡಿದ **2** ದಿನಗಳ ನಂತರ ಪೋಲಿಸರು

ನನಗೆ ಠಾಣೆಗೆ ಕರೆಸಿದ್ದರು. ನಾನು ಹಾಗೂ ನನ್ನ ಮನೆಯವರು ಹಾಗೂ ಚಾಸಾ-**7** ಮತ್ತು **8** ರವರು ಕೂಡಿ ಠಾಣೆಗೆ ಹೋಗಿದ್ದೆವು. ಅಲ್ಲಿ ಪೋಲಿಸರು ನಮ್ಮ ಮನೆಯಲ್ಲಿ ಕಳ್ಳತನ ಆದ ವಸ್ತುಗಳು ಇವೇ ಇರುತ್ತವೆ ಎಂದು ನೋಡಿ ನಮಗೆ ಗುರುತು ಹಿಡಿಯಲು ಹೇಳಿದ್ದರು. ಆದ್ದರಿಂದ ನಾವು ಅವುಗಳಲ್ಲಿ ನಮ್ಮ ಮನೆಯಲ್ಲಿ ಕಳ್ಳತನ ಆದ ವಸ್ತುಗಳು ಗುರುತಿಸಿದ್ದೆವು. ಮರುದಿನ ನಮ್ಮ ಬಂಗಾರ ಮತ್ತು ಬೆಳ್ಳಿಯ ಆಭರಣಗಳನ್ನು ವಶಕ್ಕೆ ಪಡೆದುಕೊಂಡಿದ್ದೆವು. ಇದರ ಕುರಿತು ಪೋಲಿಸರು ಛಾಯಚಿತ್ರಗಳನ್ನು ತೆಗೆದಿದ್ದರು. ನಮ್ಮ ಮನೆಯಲ್ಲಿ ಕಳ್ಳತನ ಯಾರು ಮಾಡಿರುತ್ತಾರೇಂದು ನಾನು ಪೋಲಿಸರಿಗೆ ಕೇಳಿದ್ದೆ ಅವರು ಸಯ್ಯದ್ ಸಮ್ಮದ್ದೀನ್ ಕಳ್ಳತನ ಮಾಡಿರುತ್ತಾರೇಂದು ನನಗೆ ತಿಳಿಸಿದ್ದರು. ಸದರಿ ವ್ಯಕ್ತಿಯನ್ನು ನನಗೆ ಪೋಲೀಸ್ ಠಾಣೆಯಲ್ಲಿ ತೋರಿಸಿದ್ದ್ರು ಆತನನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ವಿಸಿಯ ಮೂಲಕ ಹಾಜರಾದ ಆರೋಪಿಯನ್ನು ನೋಡಿ ಗುರುತಿಸಿ ಆತನನ್ನೆ ಪೋಲಿಸರು ಪೋಲೀಸ್ ಠಾಣೆಯಲ್ಲಿ ತೋರಿಸಿದ್ದ್ರು ಎಂದು ಹೇಳುತ್ತಾರೆ. ಆರೋಪಿಯನ್ನು ಹಾಗೂ ಬಂಗಾರ ಮತ್ತು ಬೆಳ್ಳಿ ಸಾಮಾನುಗಳನ್ನು ಗುರುತಿಸುವಾಗ ನಾನು ಮರು ಹೇಳಿಕೆಯನ್ನು ಪೋಲಿಸರಿಗೆ ನೀಡಿದ್ದೆ. ಸಾಕ್ಷಿಯು ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**1** ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯನ್ನು ನಿಪಿ-**1** ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮುಚ್ಚಳಿಕೆ ಪತ್ರವನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ನಿಪಿ-**2** ಎಂದು ಗುರುತಿಸಲಾಯಿತು ಅದರ ಮೇಲೆ ಇರುವ ಸಾಕ್ಷಿಯನ್ನು ನಿಪಿ-**2** ಎ ಎಂದು ಗುರುತಿಸಲಾಯಿತು. ಸಾಕ್ಷಿಯು **2** ಛಾಯಚಿತ್ರಗಳನು ನೋಡಿ ಗುರುತಿಸಿರುತ್ತಾರೆ ಅವುಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ ಆದ್ದರಿಂದ ಸದರಿ ಛಾಯಚಿತ್ರಗಳನು ನಿಪಿ-**3** ಮತ್ತು **4** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿ ಪರ ವಕೀಲರಾದ ಃಶ್ರೀ. ಕೆ.ಜಿ.ಎನ್. ರವರಿಂದಃ</u>

ದಿನಾಂಕ 29.11.2023 ರಂದು ಮದ್ಯಾಹ್ನ 03.00 ರಿಂದ 4.00 ಗಂಟೆಗೆ ಕಲಬುರಗಿಗೆ ಹೋಗಿದ್ದೆ. ದಿನಾಂಕ 30.11.2023 ರಂದು ರಜೆ ಇತ್ತು ಆದ್ದರಿಂದ ನಾನು ದಿನಾಂಕ 01.12.2023 ರಂದು ಬೆಳಿಗ್ಗೆ 09.15 ಗಂಟೆಗೆ ಯಾದಗಿರಿಗೆ ಬಂದು ನನ್ನ ಮನೆಗೆ ಬಂದು ಮನೆಯ ಬೀಗವನ್ನು ತೆರೆಯಲು ನೋಡಿದಾಗ ಅದು ಮುರಿದಿತ್ತು. ಬೀಗ ಮುರಿದಿತ್ತು, ಕಬ್ಬಿಣದ ರಾಡ ನನ್ನ ಮನೆಯ ಬಾಗಿಲಿನ ಬಳಿ ಬಿದಿತ್ತು. ನನ್ನ ಮನೆಯ ಪಕ್ಕ ಒಂದು ಮನೆ ಇರುತ್ತದೆ ಹಾಗೂ ಉಳಿದ ಮನೆಗಳು ಸ್ವಲ್ಪ ದೂರದಲ್ಲಿ ಇರುತ್ತವೆ. ನನ್ನ ಮನೆಯ ಸುತ್ತ ಮುತ್ತ ಮನೆಗಳು ಸ್ವಲ್ಪ ದೂರದಲ್ಲಿ ಇರುತ್ತವೆ. ನನ್ನ ಮನೆಯ ಬೀಗವನ್ನು ಮುರಿದ ಬಗ್ಗೆ ನನಗೆ ಯಾರು ಹೇಳಿರುವುದಿಲ್ಲ ನಾನು ಬಂದು ನೋಡಿದಾಗ ಮುರಿದ ಬಗ್ಗೆ ನನಗೆ ಗೊತ್ತಾಯಿತು. ಏಕೆ ನೀವು ತಾಳಿ ಚೇನು, ಕಾಲುಂಗುರ, ಕಾಲು ಚೇನು ಧರಿಸದೇ ಮನೆಯಲ್ಲಿ ಇಟ್ಟಿದ್ದೀರಿ ಎಂದರೆ ಸಾಕ್ಷಿಯು

ತಾಳಿ ಚೇನು ಕಟ್ ಆಗಿತ್ತು ಹಾಗೂ ಕಾಲುಂಗುರ, ಕಾಲು ಚೇನು ಹೊಸದಾಗಿ ಖರೀದಿ ಮಾಡಿದೆ ಆದ್ದರಿಂದ ಅವುಗಳನ್ನು ಮನೆಯಲ್ಲಿ ಇಟ್ಟು ಹೋಗಿದ್ದೆ ಎಂದು ಹೇಳುತ್ತಾರೆ. ತಾಳಿ ಚೇನು ಕಟ್ ಆಗಿತ್ತು ಹಾಗೂ ಕಾಲುಂಗುರ, ಕಾಲು ಚೇನು ಇವುಗಳನ್ನು ಖರೀದಿ ಮಾಡಿದ ಕುರಿತು ರಸೀದಿಗಳನ್ನು ನೀಡಿದಿರಾ ಎಂದರೆ ಸಾಕ್ಷಿಯು ಕಾಲುಂಗುರ, ಕಾಲು ಚೇನುಗಳನ್ನು ಖರೀದಿ ಮಾಡಿದ ರಸೀದಿಗಳನ್ನು ನೀಡಿರುತ್ತೇನೆ ಆದರೆ ತಾಳಿಯ ಚೇನು ಖರೀದಿ ಮಾಡಿದ ರಸೀದಿ ಸಿಕ್ಕಿರುವುದಿಲ್ಲ ಎಂದು ಹೇಳುತ್ತಾರೆ. ನಗದು ಹಣ 5000 ರೂಗಳಲ್ಲಿ 500 ಮುಖಬೆಲೆಯ ನೋಟುಗಳ ಇದ್ದವು ಎಂದು ಹೇಳುತ್ತಾರೆ.

ದಿನಾಂಕ 01.12.2023 ರಂದು ನಾನು ದೂರನ್ನು ಕೊಟ್ಟಿದ್ದೆ. ನಾನು ದೂರನ್ನು ನೀಡಿದ ನಂತರ ಪೋಲಿಸರು ಮದ್ಯಾಹ್ಣ ಕಳ್ಳತನ ಆದ ಸ್ಥಳಕೆ ಬಂದಿದ್ದರು. ಸ್ಥಳದಿಂದ ಕಬ್ಬಿಣದ ರಾಡನು ತೆಗೆದುಕೊಂಡು ಹೋಗಿದ್ದರು. ಕಳ್ಳತನವನ್ನು ನಾನು ಕಣ್ಣಾರೇ ನೋಡಿರುವುದಿಲ್ಲ. ಈ ಪ್ರಕರಣದಲ್ಲಿ ಕಳ್ಳತನ ಆದ ವಸ್ತುಗಳಿಗೂ ಹಾಗೂ ಆರೋಪಿತನಿಗೂ ಯಾವುದೇ ರೀತಿ ಸಂಬಂದ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕಳ್ಳತನ ಮಾಡಿದವರು ಯಾರು ಇರುತಾರೆಂದು ನನಗೆ ಗೊತ್ತಿರುವುದಿಲ್ಲ. ಆರೋಪಿತನ ಹೆಸರನ್ನು ಪೋಲಿಸರು ನನಗೆ ಹೇಳಿದ್ದರು ಆದ್ದರಿಂದ ಅವರ ಹೇಳಿಕೆಯ ಮೇರೆಗೆ ಆರೋಪಿತನ ಹೆಸರನ್ನು ಹೇಳಿರುತೇನೆ. ಆರೋಪಿತನನ್ನು ಇದೇ ಮೊದಲ ಬಾರಿಗೆ ಮಾನ್ಯ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸಾಕ್ಷಿಯು ಆರೋಪಿತನನ್ನು ಪೋಲಿಸ್ ಠಾಣೆಯಲ್ಲಿ ಸಹಾ ನೋಡಿರುತೇನೆ ಎಂದು ಹೇಳುತ್ತಾರೆ .ನಾನು ಆರೋಪಿತನನ್ನು ಪೋಲಿಸ್ ಠಾಣೆಯಲ್ಲಿ ನೋಡಿರುತೇನೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತೇನೆಂದರೆ ಸರಿಯಲ್ಲ. ನಾನು ಪೋಲಿಸ್ ರ ಮಾತನು ಕೇಳಿ ಆರೋಪಿತನನ್ನು ನೋಡಿರುತೇನೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತೇನೆಂದರೆ ಸರಿಯಲ್ಲ. ದೂರನು ನೀಡಿದ ಎರಡ ದಿನಗಳ ನಂತರ ಪೋಲಿಸರು ನನ್ನನ್ನು ಕರೆಸಿದ್ದರು ಎಂದು ಸುಳ್ಳು ಸಾಕ್ಷ್ಯ ಹೇಳಿರುತೇನೆಂದರೆ ಸರಿಯಲ್ಲ. ನಾನು ಹಾಗೂ ಚಾಸಾ-6 ರಿಂದ 8 ರವರು ಕೂಡಿ ಪೋಲಿಸ್ ಠಾಣೆಗೆ ಹೋಗಿದ್ದೆವು ಎಂದು ಸುಳ್ಳು ಸಾಕ್ಷ್ಯ ಹೇಳಿರುತೇನೆಂದರೆ ಸರಿಯಲ್ಲ. ನಿಪಿ-3 ಮತ್ತು 4 ನ್ನು

ಪೋಲಿಸ್ ಠಾಣೆಯಲ್ಲಿ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳಿರುತೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.